ಎಸ್‌. ದಿವಾಕರ್

# ನರೇಂದ್ರ ಪೈ ಕತೆಗಳು

# ಅನುಕಂಪ, ನಿರ್ಲಿಪ್ತತೆಯ ನಡುವೆ ಸಮತೋಲನ

ನರೇಂದ್ರ ಪೈ ಅವರ ಒಂಬತ್ತು ಕತೆಗಳ ಈ ಸಂಕಲನ ಸಮಕಾಲೀನ ವಾಸ್ತವಿಕತೆಯ ಬಗ್ಗೆ ನಮಗಿರುವ ವಿಶ್ವಾಸವನ್ನೇ ಬುಡಮೇಲುಗೊಳಿಸುವಂತಿದೆ. ಜೀವನದ ಭಾಗವಾಗಿರುವ ನೋವು, ಆತಂಕ, ರಹಸ್ಯ ಮತ್ತು ಸಾಧ್ಯತೆಗಳಿಂದ ತುಂಬಿ ತುಳುಕುತ್ತಿರುವ ಈ ಕತೆಗಳು ಅನುಕಂಪದ ಹಾಗೂ ನಿರ್ಲಿಪ್ತತೆಯ ನಡುವೆ ಅತ್ಯಂತ ನಾಜೂಕಾದ ಸಮತೋಲನವನ್ನು ಸಾಧಿಸುವ ಮೂಲಕ ಜಗತ್ತನ್ನು ನಾವು ಹೊಸದೊಂದೇ ಬೆಳಕಿನಲ್ಲಿ ನೋಡುವಂತೆ ಪ್ರೇರೇಪಿಸುತ್ತವೆ.

ವಿವರಣೆಗೆ ಸಿಕ್ಕದ ಕೆಡುಕಿನ ಸ್ವರೂಪ, ಮಿತಿಮೀರಿದ ಆತಂಕ, ಸನ್ನಿಹಿತವಾಗಲಿರುವ ಬಿಕ್ಕಟ್ಟು, ಇವು ಇಲ್ಲಿನ ಬಹುಪಾಲು ಕತೆಗಳ ಸ್ಥಾಯೀಭಾವವಾಗಿವೆ. ನಾವು ಸಮಾಜ ಎಂದು ಬಗೆದ ಜಗತ್ತಿನಲ್ಲಾಗಿರುವ ಪರಿವರ್ತನೆಗಳಿಗೆ ಸಿಕ್ಕಿ ನಲುಗಿಹೋಗಿರುವ ಇಲ್ಲಿನ ಪಾತ್ರಗಳು ತಮ್ಮ ತೀರ ಸಾಮಾನ್ಯವಾದ ಬದುಕನ್ನು ವಿರೂಪಗೊಳಿಸಿರುವ ಘೋರ ವಾಸ್ತವವನ್ನು ಪ್ರತಿಫಲಿಸುತ್ತವೆ. ನರೇಂದ್ರರಲ್ಲಿ ಎದ್ದು ಕಾಣುವ ಅಂಶಗಳೆಂದರೆ ಒಂದು, ಭರವಸೆ ಮತ್ತು ಭ್ರಮನಿರಸನಗಳ ಸಂಧಿಕಾಲವನ್ನು ತದೇಕಚಿತ್ತದಿಂದ ಪರಿಭಾವಿಸುವ ಅವರ ಕಥನ ಕ್ರಮ; ಇನ್ನೊಂದು, ಕತೆ ಕಟ್ಟುವ ಪ್ರಕ್ರಿಯೆಯಲ್ಲಿ ಅವರು ಸಾಧಿಸುವ ಕಲಾತ್ಮಕತೆ. ಮಕ್ಕಳ ಮುಗ್ಧಲೋಕವನ್ನು, ವಯಸ್ಕರ ಒಬ್ಬಂಟಿತನವನ್ನು, ಮೋಸ ವಂಚನೆಗಳನ್ನು, ಬದುಕಿನ ನಿರರ್ಥಕತೆಯನ್ನು ಚಿತ್ರಿಸುವ ಈ ಕತೆಗಾರ ಬೆರಗು ಹುಟ್ಟಿಸುವಷ್ಟು ಗಾಢವಾಗಿ, ಕೆಲವೊಮ್ಮೆ ತೀರ ವಿಷಾದದಿಂದಲೂ, ಬರೆಯುತ್ತಾರೆ. ಅವರ ಅನೇಕ ಕತೆಗಳಲ್ಲಿ ನಿಗೂಢತೆಯೆನ್ನುವುದು ಒಂದು ರೂಪಕವಾಗಿ ಕೆಲಸಮಾಡುತ್ತದೆ. ಅದು ಪರಿಚಿತ ಜಗತ್ತಿನ ಅಪರಿಚಿತತೆಯನ್ನು ಮನವರಿಕೆಮಾಡಿಕೊಡುವ ರೂಪಕ.

ಈ ಸಂಕಲನದ 'ಕೆಂಪು ಹಾಲು' ಕತೆಯಲ್ಲಿ ಒಬ್ಬ ಸಣ್ಣ ಹುಡುಗನ ಕಣ್ಣಿನಿಂದ ವಯಸ್ಕರ ಜಗತ್ತನ್ನು ಅರಿಯಲೆತ್ನಿಸುವ ವಿಧಾನವಿದೆ. ಇಲ್ಲಿ ಬರುವ ಉನ್ನಿಕೃಷ್ಣರ ಭೂತಬಂಗಲೆಯಂಥ ಮನೆ, ಅವರ ತಾಯಿ, ಕಾಯಿ ಸುಲಿಯುವ ಚೀಂಕ್ರ, ಅವನ ಮಗನನ್ನು ಕೊಂದುಹಾಕುವ ಪೊಲೀಸರು, ಹುಡುಗನ ಕುಡುಕ ತಂದೆ, ಎಲ್ಲರೂ ಒಬ್ಬ ಹುಡುಗನ ಜಗತ್ತನ್ನು ತೀವ್ರವಾಗಿ ಪ್ರಭಾವಿಸಿಯೂ ಅರ್ಥವಾಗದೆ ಉಳಿಯುವವರು. ಆದರೆ, ಉನ್ನಿಕೃಷ್ಣರ ಮಗಳು ಮುನ್ನಿಯ ಜೊತೆ ಆ ಹುಡುಗ